MAY 2023 **U/ID 30704/ULC2A**

Time : Three hours Maximum : 75 marks

SECTION A — (10 × 2 = 20 marks)

ಕೆಳಗಿನವುಗಳಲ್ಲಿ ಯಾವುದಾದರೂ ಹತ್ತಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ.

ಉತ್ತರದ ಮಿತಿ 30 ಪದಗಳು.

1. ಪಂಚೇಂದ್ರಿಯಗಳಿಗೆ ಬೆಳಗಿನ ಸವಿಯಿಂದಾದ ಅನುಭವಗಳೇನು?

2. ರಸವಶನಾಗುತ ಕವಿ ನೋಡಿದ ದೃಶ್ಯ ಯಾವುದು?

3. 'ಶಾರದೆ'ಯ ಅಭ್ಯಂಜನ ಹೇಗೆ ನಡೆಯಿತು ಎಂದು ಕವಿ ವರ್ಣಿಸಿದ್ದಾರೆ?

4. 'ಮನೆ ತುಂಬಿಸುವುದು' ಕವನದಲ್ಲಿ ಅಳಿಯನಿಗೆ ಹೇಳುವ ಹಿತ ನುಡಿಗಳು.

5. 'ಮಲ್ಲಿ'ಯ ಸೌಂದರ್ಯ ಕವಿಯ ಕಣ್ಣಿಗೆ ಹೇಗೆ ಕಂಡಿದೆ?

6. ಕುರುಡು ಕಾಂಚಾಣ ಧರಿಸಿದ್ದ ಆಭರಣಗಳಾವುವು?

7. 'ಓ! ನನ್ನ ಜನವೇ!' ಕವನದಲ್ಲಿ ಕನ್ನಡ ನಾಡಿನ ಜನತೆಗೆ ಕವಿ ನೀಡಿರುವ ಕರೆ ಯಾವುದು?

8. ಕುಡುಕ ಏನನ್ನು ನೋಡಿ 'ಸಮಾಧಾನ' ಪಟ್ಟುಕೊಳ್ಳುತ್ತಾನೆ?

9. 'ಅಮ್ಮ–ಆಚಾರ–ನಾನು' ಕವನದಲ್ಲಿ ನಿರೂಪಕರ ತಂದೆ, ತಮ್ಮ ಹೆಂಡತಿಗೆ ಏನು ಹೇಳಿದರು?

10. ಮುಪ್ಪಿನ ಸ್ಥಿತಿಯನ್ನು 'ಮಬ್ಬಿನಿಂದ ಮಬ್ಬಿಗೆ' ಕವನದಲ್ಲಿ ಹೇಗೆ ವರ್ಣಿಸಲಾಗಿದೆ?

11. ವಿಶ್ವ ಕುಟುಂಬಿಯನ್ನು ನೆನೆದು ನಾಗಿ ಏಕೆ ಮರುಗಿದಳು?

12. ಕುವೆಂಪು ಅವರ ಕವಿ ಪರಿಚಯವನ್ನು ಮಾಡಿ ಕೊಡಿ.

SECTION B — ($5 \times 5 = 25$ marks)

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.

ಉತ್ತರದ ಮಿತಿ 200 ಪದಗಳು.

13. ಕಾಡಿನ ನಾಡು ಗಂಧರ್ವರ ಸೀಮೆಯಾದದ್ದು ಹೇಗೆ?

14. ಶಾರದೆಯು ಮಾಗಿಯಲ್ಲಿ ಹುಟ್ಟಿ ಬೆಳೆದ ರೀತಿಯನ್ನು ವರ್ಣಿಸಿ.

15. 'ಏಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು' - ಸಂದರ್ಭದೊಂದಿಗೆ ವಿವರಿಸಿ.

16. 'ಮಲ್ಲಿ'ಯನ್ನು ಕವಿ ಹೇಗೆ ವರ್ಣಿಸಿದ್ದಾರೆ?

17. 'ಹ್ಯಾಂಗಾರ ಕುಣಿ ಕುಣಿದು, ಮಂಗಾಟ ನಡೆದಾಗ ಅಂಗಾತ ಬಿತ್ತೋ, ಹೆಗಲಲ್ಲಿ ಎತ್ತೋ' – ಸಂದರ್ಭದೊಂದಿಗೆ ವಿವರಿಸಿ.

18. ಕುಡುಕನು ಎಲ್ಲಿ, ಹೇಗೆ ಬೀಳುತ್ತಾನೆಂದು 'ಸಮಾಧಾನ' ಕವನದಲ್ಲಿ ಕವಿ ಹೇಳುತ್ತಾನೆ?

19. ನಿರೂಪಕರು ತಮ್ಮ ಹೆಂಡತಿಯ ಅಲಂಕಾರವನ್ನು ಕಂಡು ಮೂಕರಾದ ಸನ್ನಿವೇಶವನ್ನು ವಿವರಿಸಿ.

SECTION C — (3 × 10 = 30 marks)

ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

ಉತ್ತರದ ಮಿತಿ 500 ಪದಗಳು.

24ನೇ ಪ್ರಶ್ನೆ ಕಡ್ಡಾಯ.

20. 'ಕುರುಡು ಕಾಂಚಾಣ' ಕವನದ ಪ್ರತಿಮಾ ನಿರ್ಮಿತಿಯನ್ನು ವಿವರಿಸಿ.

21. 'ತುಂಗಭದ್ರೆ' ಕವನದ ಸ್ವಾರಸ್ಯವನ್ನು ತಿಳಿಸಿ.

22. 'ಶಾರದೆ' ಕವನದಲ್ಲಿ ಕವಿಯು ಪ್ರಕೃತಿಯ ಎಲ್ಲಾ ಋತುಗಳನ್ನು ಹೇಗೆ ವಿವರಿಸಿದ್ದಾರೆ?

23. 'ಅಂಗುಲ ಹುಳು'ವಿನ ಅಸಹಾಯಕತೆ ಹಾಗೂ ಅದರ ಚಾಣಾಕ್ಷತೆ ಕವನದಲ್ಲಿ ಹೇಗೆ ಮೂಡಿ ಬಂದಿದೆ?

24. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಪ್ರಬಂಧ ಬರೆಯಿರಿ.

(ಅ) ಕೊರೋನಾ ವೈರಾಣು

(ಆ) ಪ್ರವಾಹದ ಪರಿಣಾಮಗಳು

(ಇ) ನಿಮ್ಮ ನೆಚ್ಚಿನ ಕವಿ.
